RNU AIR DHARWAD

SEPTEMBER 30, 2025

# AKASHAVANI - DHARWAD

# PRADESH SAMACHARA (KANNADA) 12 PM

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಗದಗದ ತೋಂಟದಾರ್ಯ ಲಿಂಗೈಕ್ಯ ಶ್ರೀ ಸಿದ್ಧಲಿಂಗ ಶ್ರೀಗಳ** ನೆನಪಿನಲ್ಲಿ ನೀಡಲಾಗುವ, 'ಡಾಕ್ಟರ ತೋಂಟದ ಸಿದ್ಧಲಿಂಗ ಮಹಾಸ್ವಾಮಿ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿಯನ್ನು', ಈ ಬಾರಿ ಮರಣೋತ್ತರವಾಗಿ, ಸಂಶೋಧಕ ಪ್ರೊಫೆಸರ್ ಎಂ.ಎಂ ಕಲಬುರ್ಗಿ ಅವರಿಗೆ ನೀಡಲಾಗುವುದು ಎಂದು ಮಠದ ಕಾರ್ಯದರ್ಶಿ ಎಸ್.ಎಸ್ ಪಟ್ಟಣಶೆಟ್ಟರ ತಿಳಿಸಿದ್ದಾರೆ. ಪ್ರಶಸ್ತಿಯು 5 ಲಕ್ಷ ರೂಪಾಯಿ ನಗದು ಹಾಗೂ ಫಲಕ ಒಳಗೊಂಡಿದೆ. ಅಕ್ಟೋಬರ್ 3 ರಂದು ಗದಗ ತೋಂಟದಾರ್ಯ ಮಠದಲ್ಲಿ ಆಯೋಜಿತ, ಸಿದ್ಧಲಿಂಗ ಮಹಾಸ್ವಾಮಿಯವರ ಏಳನೇ, ಪುಣ್ಯಸ್ಮರಣೋತ್ಸವದಲ್ಲಿ, ಎಂ.ಎಂ ಕಲಬುರಗಿ ಅವರ ಪತ್ನಿ ಉಮಾದೇವಿ ಅವರು ಪ್ರಶಸ್ತಿ ಸ್ವೀಕರಿಸಲಿದ್ದಾರೆ.

<><><>

**ಬೀದರ ಜಿಲ್ಲೆಯಾದ್ಯಂತ,** ಕಳೆದ 7 ದಿನಗಳಲ್ಲಿ, 122 ಮಿಲ್ಲಿ ಮೀಟರ್ ಮಳೆಯಾಗಿದೆ. ವಾಡಿಕೆಗಿಂತ, ಶೇಕಡ 199 ರಷ್ಟು ಹೆಚ್ಚು ಮಳೆ, ದಾಖಲಾಗಿದೆ. ಜಿಲ್ಲೆಯಾದ್ಯಂತ, 27 ಸೇತುವೆಗಳು ಮುಳುಗಡೆಯಾಗಿವೆ. ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಹುಮನಾಬಾದ ತಾಲೂಕಿನ ಘಾಟ್‌ಬೋರಾಳ ಗ್ರಾಮದ, 12 ಮನೆಗಳಿಗೆ ಹಾಗೂ ಚಿಟಗುಪ್ಪಾ ತಾಲೂಕಿನ ಬೆಳಕೇರಾ ಗ್ರಾಮದ, 8 ಮನೆಗಳಿಗೆ ನೀರು ನುಗ್ಗಿದೆ. 2 ಕಾಳಜಿ ಕೇಂದ್ರಗಳಲ್ಲಿ, 226 ಜನ ಗ್ರಾಮಸ್ಥರಿಗೆ, ತಾತ್ಕಾಲಿಕ ಪುನರ್ವಸತಿ ಜಿಲ್ಲಾಡಳಿತ ಕಲ್ಪಿಸಿದೆ.

<><><>

**ಯಾದಗಿರಿ ಜಿಲ್ಲೆಯಲ್ಲಿ ಭೀಮಾ ನದಿ** ಪ್ರವಾಹದಿಂದ ಒಟ್ಟು 419 ಮನೆಗಳಿಗೆ ಹಾನಿಯಾಗಿದೆ, 150 ಜಾನುವಾರುಗಳು ಮೃತಪಟ್ಟಿವೆ. ನೀರಿನಲ್ಲಿ ಸಿಲುಕಿದ್ದ ವಿಶ್ವಾರಾಧ್ಯ ನಗರದ 20 ಕ್ಕೂ ಹೆಚ್ಚು ಜನರನ್ನು ಅಗ್ನಿಶಾಮಕ ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪಡೆ ಸುರಕ್ಷಿತವಾಗಿ ಸ್ಥಳಾಂತರಿಸಿದೆ.

<><><>

**ಬಿಜೆಪಿ ರಾಜ್ಯಾಧ್ಯಕ್ಷ, ಬಿ.ವೈ. ವಿಜಯೇಂದ್ರ** ನೇತೃತ್ವದ ನಿಯೋಗ, ನೆರೆ ಪೀಡಿತ ಬೀದರ ಜಿಲ್ಲೆ, ಭಾಲ್ಕಿ ತಾಲೂಕು, ನಿಟ್ಟೂರು ಹಾಗೂ ಔರಾದ್ ಕ್ಷೇತ್ರದ ಸವಳಿಸಂಗಮಕ್ಕೆ ತೆರಳಿ, ಹಾನಿ ಪರಿಶೀಲಿಸಿತು.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು,** ಇಂದು ಕಲಬುರಗಿ ಜಿಲ್ಲೆಗೆ ತಲುಪಲಿದ್ದು, ಕಲ್ಯಾಣ ಕರ್ನಾಟಕದ ಬೀದರ್, ವಿಜಯಪುರ ಸೇರಿದಂತೆ ನೆರೆ ಬಾಧಿತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಲಿದ್ದಾರೆ. ಮಧ್ಯಾಹ್ನ 2 ಗಂಟೆಗೆ ಪ್ರಾದೇಶಿಕ ಆಯುಕ್ತ ಕಚೇರಿಯಲ್ಲಿ ಮಳೆ ಹಾನಿ ಪ್ರದೇಶಗಳಲ್ಲಿ ಕೈಗೊಂಡಿರುವ ಪರಿಹಾರ ಕಾರ್ಯಗಳ ಕುರಿತು, ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ. ಕೃಷಿ ಖಾತೆ ಸಚಿವರಾದ ಎನ್. ಚಲುವರಾಯ ಸ್ವಾಮಿ ಅವರು ಕಲಬುರಗಿ ತಾಲೂಕಿನ ಪ್ರವಾಹ ಪೀಡಿತ ಸಾವಳಗಿ ಕ್ರಾಸ್, ಸರಡಗಿ ಬಿ. ಪ್ರದೇಶಗಳಿಗೆ ಭೇಟಿ ನೀಡಲಿದ್ದಾರೆ.

<><><>

**ಹಿರಿಯ ರಂಗಭೂಮಿ ಕಲಾವಿದ, ನಟ,** ಯಶವಂತ ಸರದೇಶಪಾಂಡೆ, ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಈ ಮಧ್ಯಾಹ್ನ ಚಾಮರಾಜಪೇಟೆ ರುದ್ರಭೂಮಿಯಲ್ಲಿ ನಡೆಯಲಿದೆ. ಪ್ರಸ್ತುತ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಹಿಂಭಾಗದ, ಸಂಸ ಬಯಲು ರಂಗಮಂದಿರದಲ್ಲಿ, ಪಾರ್ಥಿವ ಶರೀರದ ಸಾರ್ವಜನಿಕ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದ್ದು, ಅಭಿಮಾನಿಗಳು, ಹಿತೈಷಿಗಳು, ಗಣ್ಯರು ಆಗಮಿಸಿ, ಅಂತಿಮ ನಮನ ಸಲ್ಲಿಸುತ್ತಿದ್ದಾರೆ. ಯಶವಂತ ಸರದೇಶಪಾಂಡೆ ಅವರ ರಂಗಭೂಮಿ ಕೊಡುಗೆಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಅವರ ಅನುಗಾಲದ ಒಡನಾಡಿ ಹಾಗೂ ರಂಗಭೂಮಿ ಕಲಾವಿದರಾದ ಧಾರವಾಡದ ರವಿ ಕುಲಕರ್ಣಿ. .

<><><>

**ರವಿ ಕುಲಕರ್ಣಿ 38 ಸೆಕೆಂದುಗಳು**

<><><>

**ದಸರಾ ಹಬ್ಬದ ಹಿನ್ನೆಲೆ,** ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ–ಸಿಂಹ ಧಾಮ, ಇಂದು ಮತ್ತು ಅಕ್ಟೋಬರ್ 7, ಮಂಗಳವಾರ ಸಹ, ಪ್ರವಾಸಿಗರ ವೀಕ್ಷಣೆಗೆ ತೆರೆದಿರಲಿದೆ ಎಂದು, ಧಾಮದ ಕಾರ್ಯನಿರ್ವಾಹಕ ನಿರ್ದೇಶಕರು, ತಿಳಿಸಿದ್ದಾರೆ. ಶರನ್ನವರಾತ್ರಿ ಹಿನ್ನೆಲೆ, ಶಾಲೆಗಳಿಗೆ ರಜೆ ಘೋಷಿಸಲಾಗಿದ್ದು, ಮಕ್ಕಳಿಗೆ ಪ್ರಕೃತಿ ಮತ್ತು ವನ್ಯಜೀವಿಗಳ ಕುರಿತು, ಪ್ರಶಿಕ್ಷಣ ನೀಡಲು, ರಜೆ ದಿನವೂ ಪರಿಸರ ಶಿಕ್ಷಣ ಪಾಠಶಾಲೆಯಾದ, ಹುಲಿ–ಸಿಂಹ ಧಾಮವನ್ನು ತೆರೆದಿಡಲಾಗಿದೆ.

<><><>

**ನಾಳೆ, ಅಕ್ಟೋಬರ್ 1,** ಅಂತಾರಾಷ್ಟ್ರೀಯ ಕಾಫಿ ದಿನಾಚರಣೆ. ಚಿಕ್ಕಮಗಳೂರು ಜಿಲ್ಲೆ, ಕಾಫಿ ಬೆಳೆಗಾರರ ಸಂಘದ ವತಿಯಿಂದ, 'ವಾಕ್ ವಿತ್ ಕಾಫಿ' ಎಂಬ, ವಿಶಿಷ್ಟ ಕಾರ್ಯಕ್ರಮ ಆಯೋಜಿತವಾಗಿದೆ ಎಂದು, ಸಂಘದ ಅಧ್ಯಕ್ಷ ರತೀಶ ಕುಮಾರ ತಿಳಿಸಿದ್ದಾರೆ. ಚಿಕ್ಕಮಗಳೂರು ತಾಲೂಕು ಕಚೇರಿಯಿಂದ, ಆಝಾದ್ ಉದ್ಯಾನದ ವರೆಗೆ, 700ಕ್ಕೂ ಹೆಚ್ಚು ಜನ, ವಾಕ್ ವಿತ್ ಕಾಫಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, 20 ಕಾರ್ಮಿಕರನ್ನು ಸನ್ಮಾನಿಸಲಾಗುವುದು, ಎಂದರು.

<><><>

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ** ಮಿಷನ್ ಅಭಿಯಾನದಡಿ, ಸಂಜೀವಿನಿ ಮಹಿಳಾ ಸ್ವಸಹಾಯ ಸಂಘ ಉತ್ಪಾದಿಸಿದ, 'ಬೆಳಗಾವಿ ಸಂಜೀವಿನಿ ಶಾವಿಗೆ'ಯನ್ನು, ಸಂಸದ ಜಗದೀಶ ಶೆಟ್ಟರ ಬಿಡುಗಡೆ ಮಾಡಿದರು. ಬೆಳಗಾವಿ ಜಿಲ್ಲಾ ಪಂಚಾಯಿತಿ ಸಭಾಭವನದಲ್ಲಿ, ಅವರು ಅಗ್ರಣಿ ಬ್ಯಾಂಕ್ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಪ್ರಧಾನಮಂತ್ರಿ ಜೀವನ ಜ್ಯೋತಿ, ಪ್ರಧಾನಮಂತ್ರಿ ಸುರಕ್ಷಾ ವಿಮೆ ಹಾಗೂ ಅಟಲ್ ಪಿಂಚಣಿ ಯೋಜನೆ ಸೇರಿದಂತೆ, ಜನ ಧನ, ಮುದ್ರಾ ಯೋಜನೆಯಡಿ, ಅರ್ಹ ಫಲಾನುಭವಿಗಳನ್ನು ನೋಂದಾಯಿಸುವಂತೆ, ಸೂಚಿಸಿದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>